ದಿನಾಂಕಃ 24.02.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

*(ಆರೋಪಿಯು ನ್ಯಾಯಾಂಗ ಬಂಧನದಲ್ಲಿದ್ದು, ಆತನನ್ನು ಈ ದಿನ* ***Google meet*** *ನಲ್ಲಿ ವೀಡಿಯೋ ಕಾನ್ಫರೆನ್ಸಿಂಗ್ ಮುಖಾಂತರ ಕಾರಾಗೃಹದಿಂದ ಹಾಜರುಪಡಿಸಲಾಗಿರುತ್ತದೆ. ಸಾಕ್ಷಿಯ ವಿಚಾರಣೆಯನ್ನು ದಾಖಲಿಸುವ ಮೊದಲು ಆರೋಪಿಗೆ ಸಾಕ್ಷಿ ಮಾತನಾಡುವುದು ಸರಿಯಾಗಿ ಕೇಳಿಸುತ್ತಿದೆ ಮತ್ತು ವಿಡಿಯೋ ಕಾನ್ಫರೆನ್ಸಿಂಗ್ ಮುಖಾಂತರ ಸಾಕ್ಷಿಯ ವಿಚಾರಣೆಯನ್ನು ದಾಖಲಿಸಲು ಯಾವುದೇ ತಾಂತ್ರಿಕ ಸಮಸ್ಯೆ ಇಲ್ಲವೆಂದು ಖಾತ್ರಿಪಡಿಸಿಕೊಳ್ಳಲಾಯಿತು.)*

ಪಾಟೀ ಸವಾಲುಃ ಆರೋಪಿಯ ಪರವಾಗಿ ಶ್ರೀ ಹೆಚ್.ಎಂ.ಎಸ್. ವಕೀಲರ ಪರವಾಗಿ ಶ್ರೀ ವಿ.ಎಂ.ಎಲ್. ವಕೀಲರಿಂದಃ-

6. ನೀವು ಪ್ರಾಸಾ.1 ರವರ ಹೇಳಿಕೆಯನ್ನು ಪಡೆದುಕೊಂಡಿದ್ದಾಗಿ ಹೇಳಿದ್ದೀರಿ ಆ ಸಮಯದಲ್ಲಿ ಗಾಯಾಳು ಯಾವ ವಾರ್ಡಿನಲ್ಲಿದ್ದರು ಎಂದರೆ ಸಾಕ್ಷಿ ಸಾಮಾನ್ಯ ವಾರ್ಡಿನಲ್ಲಿದ್ದರು ಎನ್ನುತ್ತಾರೆ. ಸಾಕ್ಷಿ ಮುಂದುವರೆದು ಆಗಷ್ಟೇ ಗಾಯಾಳುವನ್ನು ಸದರಿ ಆಸ್ಪತ್ರೆಗೆ ಕರೆತರಲಾಗಿತ್ತು ವೈದ್ಯರ ಸೂಚನೆಯ ಮೇರೆಗೆ ಅವರನ್ನು ಹೈಯರ್ ಸೆಂಟರ್ ಗೆ ಕರೆದುಕೊಂಡು ಹೋಗಲು ವಾಹನಕ್ಕಾಗಿ ಅವರ ಕಡೆಯವರು ಕಾಯುತ್ತಿದ್ದರು ಹಾಗಾಗಿ ಗಾಯಾಳುವನ್ನು ಸಾಮಾನ್ಯ ವಾರ್ಡಿನಲ್ಲಿ ಇರಿಸಲಾಗಿತ್ತು ಎನ್ನುತ್ತಾರೆ. ಸಾಮಾನ್ಯವಾಗಿ ಸಣ್ಣಪುಟ್ಟ ಗಾಯಗಳಾದರೆ

ಗಾಯಾಳುಗಳನ್ನು ಸಾಮಾನ್ಯ ವಾರ್ಡಿನಲ್ಲಿ ಇರಿಸಿ ಚಿಕಿತ್ಸೆ ನೀಡಲಾಗುತ್ತದೆ ಎಂದರೆ ಸರಿ. ನೀವು ಆಸ್ಪತ್ರೆಗೆ ಭೇಟಿ ನೀಡಿದಾಗ ಗಾಯಾಳುವನ್ನು ಮಾತನಾಡಿಸಿದ್ದೀರಾ ಎಂದರೆ ಸಾಕ್ಷಿ ಮಾತನಾಡಿಸಿಲ್ಲ ಕಾರಣ ವೈದ್ಯರು ಆತ ಮಾತನಾಡುವ ಸ್ಥಿತಿಯಲ್ಲಿ ಇಲ್ಲ ಎಂದು ಇಂಟಿಮೇಷನ್ ಕೊಟ್ಟಿದ್ದರು ಎನ್ನುತ್ತಾರೆ. ಫ್ರಾಸಾ.1 ರವರ ಹೇಳಿಕೆಯನ್ನು ಪಡೆಯುವ ಕಾಲಕ್ಕೆ ಅವರ ಮತ್ತು ಗಾಯಾಳುವಿನ ಸುತ್ತಮುತ್ತ ಯಾರೆಲ್ಲಾ ಇದ್ದರು ಎಂದರೆ ಸಾಕ್ಷಿ ಸಂಬಂಧಿಕರು ಮತ್ತು ಗ್ರಾಮಸ್ಥರು ಸುಮಾರು 5 ರಿಂದ 6 ಜನರು ಇದ್ದರು, ಆದರೆ ಅವರ ಹೆಸರು ಗೊತ್ತಿಲ್ಲ ಎನ್ನುತ್ತಾರೆ. ಆ ಸಂದರ್ಭದಲ್ಲಿ ವೈದ್ಯರು ಮತ್ತು ನರ್ಸ್‌ಗಳು ಹಾಜರಿದ್ದರು. ಫ್ರಾಸಾ.1 ರವರ ಹೇಳಿಕೆಯನ್ನು ಪಡೆದುಕೊಂಡಿದ್ದಾಗಿ ಹೇಳಿದ್ದೀರಿ ಸದರಿ ಹೇಳಿಕೆಗೆ ವೈದ್ಯರ ಅಥವಾ ನರ್ಸ್‌ಗಳ ಸಹಿಗಳನ್ನು ಪಡೆದಿದ್ದೀರಾ ಎಂದರೆ ಸಾಕ್ಷಿ ಪಡೆದಿಲ್ಲ ಎನ್ನುತ್ತಾರೆ.

7. ದಿನಾಂಕಃ 10-03-2023 ರಂದು ನಾನು ಠಾಣೆಯಲ್ಲಿದ್ದಾಗ ಫ್ರಾಸಾ.8 ರವರು ಬಾಳೆಹೊನ್ನೂರು ಸರ್ಕಾರಿ ಆಸ್ಪತ್ರೆಗೆ ಭೇಟಿ ನೀಡಿ ಅಲ್ಲಿ ಹಲ್ಲೆಯ ಹಿನ್ನಲೆಯಲ್ಲಿ ದಾಖಲಾಗಿ ಚಿಕಿತ್ಸೆ ಪಡೆಯುತ್ತಿದ್ದ ಗಾಯಾಳು ರವಿರವರ ಹೇಳಿಕೆಯನ್ನು ಪಡೆದುಕೊಂಡು ಬರುವಂತೆ ಮೌಖಿಕವಾಗಿ ನನಗೆ ಸೂಚಿಸಿ ಕಳುಹಿಸಿದ್ದರು ಎಂದು ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ. ಅದರಂತೆ ನಾನು ಸಂಜೆ 4.50 ಗಂಟೆಗೆ ಬಾಳೆಹೊನ್ನೂರು ಸರ್ಕಾರಿ ಆಸ್ಪತ್ರೆಗೆ ಭೇಟಿ ನೀಡಿ ಸದರಿ ಆಸ್ಪತ್ರೆಯ ವೈದ್ಯಾಧಿಕಾರಿಗಳು ನೀಡಿದ ಎಂ.ಎಲ್.ಸಿ. ಮಾಹಿತಿ

ಪತ್ರವನ್ನು ನಿಪಿ.44 ರಂತೆ ಸ್ವೀಕರಿಸಿದೆನು ಎಂದು ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ.

8. ಸದರಿ ಎಂ.ಎಲ್.ಸಿ. ಮಾಹಿತಿ ಪತ್ರದಲ್ಲಿ ವೈದ್ಯಾಧಿಕಾರಿಗಳು "Pt is in critical condition unable to give statement" ಎಂದು ನಮೂದು ಮಾಡಿರುತ್ತಾರೆ, ಹಾಗಾಗಿ ಗಾಯಾಳುವಿನ ಜೊತೆ ಇದ್ದ ಅವರ ಹೆಂಡತಿಯಾದ ಫ್ರಾಸಾ.1 ಜಯರವರು ಘಟನೆಗೆ ಸಂಬಂಧಿಸಿದಂತೆ ನೀಡಿದ ಹೇಳಿಕೆಯನ್ನು ಸಂಜೆ 5.30 ರಿಂದ 6.30 ಗಂಟೆಯವರೆಗೆ ನಿಪಿ.1 ರಂತೆ ಪಡೆದುಕೊಂಡೆನು, ನಂತರ ವೈದ್ಯರು ನೀಡಿದ ಮಾಹಿತಿ ಪತ್ರ ಮತ್ತು ಸದರಿ ಹೇಳಿಕೆಯೊಂದಿಗೆ ಸಂಜೆ 6.45 ಗಂಟೆಗೆ ಠಾಣೆಗೆ ಹಿಂದಿರುಗಿ ಆಗ್ಗೆ ಠಾಣಾಧಿಕಾರಿಯಾಗಿ ಕರ್ತವ್ಯದಲ್ಲಿದ್ದ ಫ್ರಾಸಾ.8 ರವರಿಗೆ ಅವುಗಳನ್ನು ಮುಂದಿನ ಕ್ರಮಕ್ಕಾಗಿ ಹಾಜರುಪಡಿಸಿದೆನು ಎಂದು ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ. ನೀವು ಹೇಳಿದಂತೆ ಯಾವುದೇ ಕರ್ತವ್ಯವನ್ನು ನಿರ್ವಹಿಸದೇ ಇದ್ದರೂ ಸಹ ಮೇಲಾಧಿಕಾರಿಗಳ ಮಾತನ್ನು ಕೇಳಿ ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ ಇಲ್ಲ.</u>

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು )

ಓ.ಹೇ.ಕೇ.ಸ.ಇ.ಎ.ಓ.
ಸಹಿ/-
(ಭಾನುಮತಿ ಬಿ.ಸಿ)
1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಮಗಳೂರು.

ಸಾಕ್ಷಿಯ ಸಹಿ